doc-570
T-P-2

Reg No B G 155 25 — 10 —72

In The State First Golden Jubilee Celebrated Paper 'Satyavadi' daily, Mysoe 4

ಸಹಕಾರಿ ಆಸ್ಪತ್ರೆ

ಕ್ವಿಲೋನ್— ಇಲ್ಲಿಗೆ ಹತ್ತಿರದ ಕರಿಕೋಡಿನಲ್ಲಿ ನಿರುದ್ಯೋಗಿ ಡಾಕ್ಟರುಗಳು ಪ್ರಥಮ ಸಹಕಾರಿ ಆಸ್ಪತ್ರೆ ಸ್ಥಾಪಿಸಿದಾರೆ

●

ಸರಕಾರಿ ನೌಕರರ ಸಮ್ಮೇಳನ

ಬಳ್ಳಾರಿ— ತಾ ॥ 29 ರಂದು ನಡೆಯುವ ಸರಕಾರಿ ನೌಕರರ ರಾಜ್ಯ ಮಟ್ಟದ ಸಮ್ಮೇಳನದ ಉದ್ಘಾಟನೆಯನ್ನು ಮುಖ್ಯ ಮಂತ್ರಿ ಶ್ರೀ ದೇವರಾಜಅರಸ್ ರವರು ನೆರವೇರಿಸುವರು.

○

ಕೃತಕ ನೇತ್ರಗಳು

ಜರೂಸೆಲಂ— ಕೃತಕ ಮೂತ್ರಕೋಶ ಕಂಡುಹಿಡಿದ ಡಚ್ ವೈದ್ಯ ॥ ಜೋ ಹೆಕೋಲ್ಫ್, ಕುರುಡರಿಗೆ ದೃಷ್ಟಿ ಕೊಡಬಲ್ಲ ಕೃತಕ ನೇತ್ರ ತಯಾರಿಕೆ ಪ್ರಯತ್ನ ಅಭಿವೃದ್ಧಿಗೊಳ್ಳುತ್ತಿರುವುದಾಗಿ ಹೇಳಿರುವರು.

●

ಅಣ್ಣಾ ಡಿಎಂಕೆ

ಮಧುರಾಸು— ಅಣ್ಣಾ ಡಿಎಂಕೆ ಗೆ ಈಗಾಗಲೇ 10 ಲಕ್ಷಕ್ಕೂ ಹೆಚ್ಚು ಸದಸ್ಯರು ಸೇರಿರುವುದಾಗಿ ಎಂ.ಜಿ.ಆರ್. ಹೇಳಿದರು.

○

ನವೀನ ಸಾಧನೆ

ನವದೆಹಲಿ— ಏಷ್ಯಾ—72 ಮೇಳದಲ್ಲಿ ತಮಿಳುನಾಡು ಮಂಟಪದಲ್ಲಿ ಒಂದು ಕೊಳದೊಳಗೆ ಒಂದು ವಿದ್ಯುಚ್ಛಕ್ತಿ ಸಂಗೀತ ಚಿಲುಮೆ ಇರುವುದು.

●

ಸಭೆ ಮಧ್ಯೆ ಹಾವುಗಳ ಎಸೆತ

ತ್ರಿಚ್ಚೂರು— ಕೇರಳ ವರ್ತಕ ಕಾಲೇಜು ಯುನಿಯನ್ನಿನ ಉದ್ಘಾಟನಾ ಸಮಾರಂಭ ನಡೆಯುತ್ತಿದ್ದಾಗ ದುಷ್ಕರ್ಮಿಗಳು ಹಾವುಗಳು ತುಂಬಿದ್ದ ಪ್ಲಾಸ್ಟಿಕ್ ಚೀಲಗಳನ್ನು ಮಹಿಳೆಯರ ಕಡೆಗೆ ಎಸೆದರು ; ಹುಡುಗಿಯರು ಭೀತಿಗೊಂಡು ಸಭಾಂಗಣದಿಂದ ಓಡಿಹೋದರು.

●

ಡಕಾಯಿತ — ತಪ್ಪಿತಸ್ಥನಲ್ಲ !

ಗ್ವಾಲಿಯರ್— ಅತಿ ಭೀತಿಗೆ ಕಾರಣನಾಗಿದ್ದ ಚೌಬಾಲ್ ಕಣಿವೆಯ ಕುಖ್ಯಾತ ಡಕಾಯಿತ ಮೋಹನಸಿಂಗನ ವಿಚಾರಣೆಯನ್ನು ವಿಶೇಷ ನ್ಯಾಯಾಸ್ಥಾನದಲ್ಲಿ ಪ್ರಾರಂಭವಾಯಿತು — ಕೊಲೆಯೂ ಸೇರಿ ಇತರ ತಕ್ಸೀರುಗಳನ್ನು ಓದಿದಾಗ ತಾನು ನಿರಪರಾಧಿಯೆಂದು ಹೇಳಿದನು — ಏಪ್ರಿಲ್‌ನಲ್ಲಿ ಇವನ್ನು ಶರಣಾಗತನಾಗುವ ಮುನ್ನಾ ಇವನ ತಲೆಯ ಮೇಲೆ ರೂ. 2 ಲಕ್ಷ ಬಹುಮಾನ ಇಡಲಾಗಿತ್ತು !

ಉಪಚುನಾವಣೆಯಲ್ಲಿ

ಬೆಂಗಳೂರು— ಉಪಚುನಾವಣೆಯಲ್ಲಿ ಮಂಡ್ಯದ ಪಾರ್ಲಿಮೆಂಟು ಸ್ಥಾನವು ಆಡಳಿತ ಕಾಂಗ್ರೆಸ್ಸಿನ ಶ್ರೀ ಚಿಕ್ಕಲಿಂಗಯ್ಯನವರಿಗೂ, ನಾಗಮಂಗಲ ಕ್ಷೇತ್ರದ ಶಾಸನಸಭಾ ಸ್ಥಾನವು ಹಳೇ ಕಾಂಗ್ರೆಸ್ಸಿನ ಶ್ರೀ ಕೃಷ್ಣಪ್ಪನವರಿಗೂ ದೊರೆಯಿತು.

★

ಚಲನಚಿತ್ರೋತ್ಸವ

ಮೈಸೂರು— ಇಂದು ಸಮಾಪ್ತಿಗೊಳ್ಳುವ ದಸರಾ ಚಲನಚಿತ್ರೋತ್ಸವ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಯಶಸ್ವಿಯಾಗಿದ್ದುದಲ್ಲದೆ, ಕಳೆದ ವರ್ಷಕ್ಕಿಂದ ಹೆಚ್ಚು ಆದಾಯ ತಂದಿವೆ ಎಂದು ಈ ಸಂಬಂಧ ಉಪಸಮಿತಿ ಅಧ್ಯಕ್ಷ ಶ್ರೀ ಕೆ. ಕೆ. ಮೂರ್ತಿಯವರು ಪತ್ರಿಕೆಯವರಿಗೆ ತಿಳಿಸಿದರು — ಚಲನಚಿತ್ರೋತ್ಸವದಲ್ಲಿ ರೂ. 60000 ಕ್ಕಿಂತ ಹೆಚ್ಚಾಗಿಯೂ, ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ರೂ. 79235 ದೊರೆತಿರುವುದೆಂದೂ ತಿಳಿಸಿದರು ; ಖರ್ಚು ರೂ. 2 ಲಕ್ಷ.

○

ಪುರಸಭೆ

ಮೈಸೂರು— ಈ ತಿಂಗಳ ಸಾಧಾರಣ ಪುರಸಭಾಧಿವೇಶನವು ತಾ ॥ 31 ಮಂಗಳವಾರ ಮಧ್ಯಾಹ್ನಾತ್ಪರ 4 ಗಂಟೆಗೆ ನಡೆಯುವುದಾಗಿದೆ.

○

68 ದಿನಗಳ ಮುಷ್ಕರ

ಜಯಪುರ— 68 ದಿನಗಳ ಹಳೆಯದಾದ ರಾಜಸ್ಥಾನದ 5000 ಮೆಡಿಕಲ್ ವಿದ್ಯಾರ್ಥಿಗಳ ಮತ್ತು ಹೌಸ್‌ಸರ್ಜರ್‌ಗಳ ಮತ್ತು ರಿಜಿಸ್ಟ್ರಾರರುಗಳ ಮುಷ್ಕರವು ಮುಕ್ತಾಯಗೊಂಡಿತು.

○

ಭತ್ತದ ಮೇಲಿನ ಸರ್ವಸ್ವಾಮಿತ್ವ

ಬೆಂಗಳೂರು— ಏಜಿಸಿ ಸೂಚಿಸಿರುವಂತೆ ಭತ್ತವನ್ನು ಸರ್ವಸ್ವಾಮಿತ್ವದಲ್ಲಿ ಪಡೆದುಕೊಳ್ಳಲು ಮಂತ್ರಿಮಂಡಲ ನಿರ್ಧರಿಸಿದೆ — ಹೆಚ್ಚು ಜಿಲ್ಲೆ ಕೊಡಲಾಗುವುದು — ಶೀಘ್ರ ಜಾರಿಯಿಲ್ಲ.

○

ನಿರ್ಧಾರವಿಲ್ಲ

ಬೆಂಗಳೂರು— ಮೈಸೂರು ವಿಶ್ವವಿದ್ಯಾಲಯದ ಮುಂದಿನ ಉಪಕುಲಪತಿ ಬಗ್ಗೆ ಸರಕಾರ ಇನ್ನೂ ನಿರ್ಧರಿಸಿಲ್ಲವೆಂದೂ ಈಗಿನವರ ಅವಧಿ ಈ ತಿಂಗಳ ಕಡೆಯಲ್ಲಿ ಮುಗಿಯುವುದೆಂದೂ ಹೇಳಲಾಗಿದೆ.

★ ಬೆಂಗಳೂರು— ತಾಲ್ಲೂಕು ಜೋಡ್ ಚುನಾವಣೆಗಳನ್ನು ಏಪ್ರಿಲ್‌ನಲ್ಲಿ ನಡೆಸಲು ನಿರ್ಧರಿಸಲಾಗಿದೆ.



ಮೈಸೂರು ದಸರಾ ವಸ್ತುಪ್ರದರ್ಶನ
ಮತ್ತು
ಕೈಗಾರಿಕಾ ಮೇಳ 1972

ಸಾಂಸ್ಕೃತಿಕ ಕಾರ್ಯಕ್ರಮ 25–10–1972 ಬುಧವಾರ

ಕಲಾಕ್ಷೇತ್ರ

6 ರಿಂದ 7 ಸಂಜೆ	ಮಿಸೆಸ್ ಸರೋಜ, ಮೈಸೂರು	ಸಂಗೀತ
7 ರಿಂದ ರಾತ್ರಿ 9–30	ಶ್ರೀ ಮೂರ್ತಿ ಮಿತ್ರ ಮಂಡಲಿ, ಮೈಸೂರು	ನಾಟಕ "ಐಕ್ಯತೆ"

ಜೀವನರಾಯನಕಟ್ಟೆ

6–30 ರಿಂದ ರಾತ್ರಿ 8	ಶ್ರೀಮತಿ ವಸಂತ, ಮೈಸೂರು	ಸಂಗೀತ
8 ರಿಂದ ರಾತ್ರಿ 9–30	ಶ್ರೀ ಚಾಮುಂಡೇಶ್ವರಿ ವಾದ್ಯಗೋಷ್ಠಿ, ಬೆಂಗಳೂರು	ವಾದ್ಯಗೋಷ್ಠಿ

ಮೈಸೂರು ದಸರಾ ವಸ್ತುಪ್ರದರ್ಶನ
ಮತ್ತು
ಕೈಗಾರಿಕಾ ಮೇಳ 1972

ಸಾಂಸ್ಕೃತಿಕ ಕಾರ್ಯಕ್ರಮ 26–10–1972 ಗುರುವಾರ

ಕಲಾಕ್ಷೇತ್ರ

ಸಂಜೆ 6 ರಿಂದ 7–30	ಶ್ರೀವರ್ಮಾ ಬಿ. ಎಲ್. ಆಚಾರ್ಯ, ಮೈಸೂರು	ಪಿಟೀಲು
7–30 ರಿಂದ ರಾತ್ರಿ 9–30	ಶ್ರೀಮತಿ ರತ್ನಾಬಾಯಿ ಕೃಷ್ಣಮೂರ್ತಿ, ಮೈಸೂರು	ಸಂಗೀತ

ಜೀವನರಾಯನಕಟ್ಟೆ

ಸಂಜೆ 6 ರಿಂದ 7	ಶ್ರೀಮತಿ ಬಿ ಆರ್. ಜಯಲಕ್ಷ್ಮೀ, ಮೈಸೂರು	ಸಂಗೀತ
7 ರಿಂದ ರಾತ್ರಿ 9–30	ಶ್ರೀ ವಿದ್ಯಾಗಣಪತಿ ಸಂಘ, ಬೆಳಗೊಳ	ನಾಟಕ "ಗಂಡನ ಮನೆ"

ವಿಶ್ವವು ಸಸ್ಯಾಹಾರದ ಕಡೆ ಹೆಚ್ಚೆಚ್ಚು ಗಮನ ಕೊಡುತ್ತಿದೆನ್ನಲಾಗುತ್ತಿದೆ; ಸಸ್ಯಗಳ ಸಂಬಂಧದ ಹಸರು ಕ್ರಾಂತಿಯಲ್ಲಿ ಆಹಾರದಲ್ಲಿಯ ಪೋಷಣಾಂಶ ಹೆಚ್ಚುತ್ತಿರುವುದು ಕಂಡುಬಂದಿದೆ.

ಅಪೇಕ್ಷಿತಾದ ಗಟ್ಟಸ್ಪರ್ಧೆಗೆ 3 ಮೈಲಿ ದೂರದಲ್ಲಿ ವಿಶ್ವದ ಅತಿ ಚಿಕ್ಕ ಕುದುರೆಗಳ ಕ್ಷೇತ್ರವಿದ್ದು, ಅದನ್ನು ಜೀವಮಾನದಲ್ಲಿ ಹಡಗಿನ ಕೆಲಸದಲ್ಲದ್ದ ಮೂವರು ನೋಡಿಕೊಳ್ಳುತ್ತಾರೆ.

ಟೆಂಡರ್ ಪ್ರಕಟಣೆ

ನಂ. 5. ತಾ. 20-10-1972

ಲಾರಿ ಮಾಲೀಕರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ದ್ವಿಪ್ರತಿಗಳಲ್ಲಿ ನೊಹರಾದ ಟೆಂಡರ್‌ಗಳನ್ನು, ಮೈಸೂರಿನಲ್ಲಿರುವ, ಮೈಸೂರು ಸರ್ಕಲ್‌ನ ಸೂಪರ್‌ಟೆಂಡಿಂಗ್ ಇಂಜಿನಿಯರ್‌ರವರ ಕಚೇರಿಯಿಂದ ಪಡೆಯಬಹುದಾದ ವಿಧಾಯಕವಾದ ಫಾರಂನಲ್ಲಿ "ಮೈಸೂರು ನಗರ, ಬೆಂಗಳೂರು, ಹಾಸನ ಅಥವಾ ಕಾರವಾರ್ ಕಾರ್ಖಾನೆಗಳಿಂದ ಈ ಕೆಳಗೆ ಸೂಚಿಸಿರುವ ಲಿಫ್ಟ್ ನೀರಾವರಿ ಯೋಜನೆಗಳ ನಿವೇಶನಕ್ಕೆ 380 ಎಂಎಂ ನಿಂದ 760 ಎಂಎಂ ಅಡ್ಡಳತೆ ಇರುವ ಆರ್. ಸಿ. ಪೈಪ್‌ಗಳನ್ನು ಮತ್ತು ಕಾಲರ್‌ಗಳನ್ನು ಖಾಲಿ ಮಾಡುವ, ಸಾಗಾಣಿಕೆ ಮಾಡುವ ಮತ್ತು ತಲುಪಿಸುವ" ಕೆಲಸಕ್ಕಾಗಿ ಈ ಕೆಳಗೆ ಸಹಿ ಮಾಡಿರುವವರಿಂದ 13-11-72 ರ ಮಧ್ಯಾಹ್ನ 4 ಗಂಟೆ ವರೆಗೆ ಸ್ವೀಕರಿಸಲ್ಪಡುವುದು.

ಲಿಫ್ಟ್ ನೀರಾವರಿ ಯೋಜನೆ ಸ್ಥಳ	ಅಂದಾಜು ಪ್ರಮಾಣ	ಪಿಡಬ್ಲ್ಯೂಡಿ ವಿಭಾಗಗಳ ಹೆಸರು
1 ರಾಂಪುರ, ನಂಜನಗೂಡು ತಾಲ್ಲೂ	ಟೆಂಡರ್ ಪೆಡ್ಯೂಲಿನಲ್ಲಿ ಒದಗಿಸಲಾಗುವುದು	ಮೈಸೂರು ವಿಭಾಗ
2 ಸಾಥೆಗಾಲ	ಪಿ 3 – 600 ಎಂಎಂ – 175 ನಂ.ಗಳು ಪಿ 2 – 600 ಎಂಎಂ – 360 " ಪಿ 1 – 600 ಎಂಎಂ – 400 "	ಚಾ. ನಗರ ವಿಭಾಗ
3 ಚಂದಹಳ್ಳಿ	ಪ್ರೀ ಸ್ಟ್ರೆಸ್ಡ್ – 760 ಎಂಎಂ – 350 ನಂ. ಗಳು	ಚಾ. ನಗರ ವಿಭಾಗ
4 ಮುಳ್ಳೂರು ಕಲಿಯೂರು	ಟೆಂಡರ್ ಪೆಡ್ಯೂಲ್‌ನಲ್ಲಿ ಒದಗಿಸಲಾಗುವುದು	ಡಿಟೋ
5 ಮುಂದಗೆರೆ	ಪಿ 2 – 600 ಎಂಎಂ – 175 ನಂ. ಗಳು	ಮಂಡ್ಯ ವಿಭಾಗ
6 ಗದ್ದೆ ಹೊಸೂರು	ಪಿ 2 – 300 ಎಂಎಂ – 260 ನಂ. ಗಳು	ಡಿಟೋ
7 ಮಲ್ಲಿಗೆರೆ	ಪಿ 1 – 540 ಎಂಎಂ – 190 ನಂ. ಗಳು ಪಿ 2 – 540 ಎಂಎಂ – 100 ನಂ. ಗಳು	ಡಿಟೋ
8 ಮಾವಿನಹಳ್ಳಿ	ಟೆಂಡರ್ ಪೆಡ್ಯೂಲಿನಲ್ಲಿ ಒದಗಿಸಲಾಗುವುದು	ಮೈಸೂರು ವಿಭಾಗ
9 ಕಡಜೆಟ್ಟಿ	ಪಿ 1 – 760 ಎಂಎಂ – 130 ನಂ ಗಳು	ಡಿಟೋ
10 ಸೋಮನಹಳ್ಳಿ	ಪಿ 1 – 600 ಎಂಎಂ – 55 ನಂ. ಗಳು ಪಿ 1 – 600 ಎಂಎಂ – 250 " ಎಪಿ 2 – 600 ಎಂಎಂ – 100 "	ಮಂಡ್ಯ ವಿಭಾಗ

1 ಪ್ರತಿಯೊಂದು ಕೆಲಸದ ಅಂದಾಜು ಮೌಲ್ಯ ಮತ್ತು ಠೇವಣಿ ಇಡಬೇಕಾದ ಇ ಎಂ ಡಿ ಇವುಗಳು ಟೆಂಡರ್ ಫಾರಂನಲ್ಲಿ ಸೂಚಿಸಲ್ಪಟ್ಟಿವೆ

2 ಲಾರಿ ಮಾಲೀಕರುಗಳು ಮತ್ತು ಸಾಗಾಣಿಕೆ ಕಂಟ್ರಾಕ್ಟರ್‌ಗಳು ಮಾತ್ರ ಸಲ್ಲಿಸತಕ್ಕದ್ದು. 11-11-72 ರ ವರೆಗೆ ಲಾರಿಯ ರಿಜಿಸ್ಟ್ರೇಷನ್ ರಿನ್ಯೂಯಲ್ ಸರ್ಟಿಫಿಕೇಟ್ ಅಥವಾ ರಿಜಿಸ್ಟ್ರೇಷನ್ ಸರ್ಟಿಫಿಕೇಟ್‌ನ್ನು ಖುದ್ದಾಗಿ ಹಾಜರ್‌ಪಡಿಸಿದಲ್ಲಿ ಟೆಂಡರ್ ಫಾರಂಗಳನ್ನು ಕೊಡಲ್ಪಡುವುವು. ಕೆಲಸದ ವೇಳೆಗಳಲ್ಲಿ ರೂ 5/- ಪಾವತಿ ಮಾಡಿ ಫಾರಂ ಪಡೆಯತಕ್ಕದ್ದು. ಈ ಹಣವನ್ನು ವಾಪಸು ಮಾಡುವುದಿಲ್ಲ

3 ಮೇಲ್ಕಂಡ ಎಲ್ಲಾ ಯೋಜನೆಗಳಿಗೂ ಅಥವಾ ಯಾವುದಕ್ಕೂ ಲೋಡಿಂಗ್ ಮತ್ತು ಅನ್-ಲೋಡಿಂಗ್ ಸಮೇತ ಪ್ರತಿಯೊಂದು ಆಕಾರದ ಪೈಪ್‌ಗೆ ಕೆ. ಎಂ. ವೊಂದಕ್ಕೆ ಸಾಗಾಣಿಕೆ ದರವನ್ನು ಟೆಂಡರ್‌ದಾರರು ತಿಳಿಸತಕ್ಕದ್ದು. ಯಾವುದೇ ಕಾರಣಗಳನ್ನು ಕೊಡದೆ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕು ಈ ಕೆಳಗೆ ಸಹಿ ಮಾಡಿರುವವರಿಗೆ ಮೀಸಲಾಗಿದೆ

4 ಸಂಬಂಧಪಟ್ಟ ಎಕ್ಸಿಕ್ಯುಟೀವ್ ಇಂಜಿನಿಯರ್‌ರವರಿಗೆ ಯಶಸ್ವಿ ಆದ ಟೆಂಡರ್‌ದಾರರು ಒಪ್ಪಂದದ ಬಾಂಡ್‌ನ್ನು ಬರೆದುಕೊಡಬೇಕು.

5 ಪೂರ್ಣ ವಿವರಗಳಿಗೆ ಅಪೇಕ್ಷಿತ ಟೆಂಡರ್‌ದಾರರು ಕೆಲಸದ ಎಲ್ಲ ದಿನಗಳಲ್ಲಿ 2-11-72 ರಿಂದ ಈ ಕಚೇರಿಯೊಡನೆ ವ್ಯವಹರಿಸಬಹುದು.

ಸಹಿ/- ಎಸ್. ನೀಲಕಂಠಪ್ಪ,
ಸೂಪರ್‌ಟೆಂಡಿಂಗ್ ಇಂಜಿನಿಯರ್,
ಮೈಸೂರು ಸರ್ಕಲ್, ಮೈಸೂರು.

ಗೋವು ವಧಿಸಲ್ಪಡತಕ್ಕದ್ದಲ್ಲ

ವೇದಮಂತ್ರಗಳ ಜಾಗರೂಕತೆಯ ಪರ್ಯಾಲೋಚನೆಯು, ಗೋವು ಕೊಲ್ಲಲ್ಪಡತಕ್ಕದಲ್ಲವೆಂಬುದನ್ನು ಸ್ಪಷ್ಟಪಡಿಸುತ್ತವೆ. ಇದು ವೇದಮಂತ್ರಗಳಲ್ಲಿ ಅನೇಕ ರೀತಿಗಳಲ್ಲಿ ತಿಳಿಸಲಾಗಿದೆ. ವೇದಗಳಲ್ಲಿ "ಒಂದು ಗೋವು ಮತ್ತು ಗೂಳಿ" ಯ ಹೆಸರೇ ಅಘ್ನ್ಯಾ ; ಕೊಲ್ಲಲ್ಪಡತಕ್ಕದ್ದಲ್ಲ ವೆಂದು ಅದರ ಅರ್ಥ. ಯಾತರ ಹೆಸರೇ ಅಘ್ನ್ಯಾ ವಾಗಿರುವಾಗ, ಅದನ್ನು ಕತ್ತರಿಸುವುದಾಗಲೀ ವಧೆ ಮಾಡುವುದಾಗಲೀ ಅಸಾಧ್ಯವು, ವೇದಪದಗಳು ಅರ್ಥಗರ್ಭಿತವು ; ಅರ್ಥಗರ್ಭಿತವಾದವು ಮತ್ತು ಸಹಜವಾಗಿ ಸಮಂಜಸವು, ಆದುದರಿಂದ, ಯಾತರ ಹೆಸರೇ ಅಘ್ನ್ಯಾ, ಕೊಲ್ಲಲ್ಪಡತಕ್ಕದ್ದಲ್ಲವಾಗಿರುವಾಗ, ಅವುಗಳ ವಧೆಯು ವೇದಕಾಲದಲ್ಲಿ ಅಸಾಧ್ಯವು ; ಮತ್ತು ವಧೆಮಾಡದೆ ಗೋಮಾಂಸವನ್ನು ಹವನದಲ್ಲಿ ಅರ್ಪಿಸುವುದು ಪೂರ್ತಾ ಅಸಾಧ್ಯವು. ಗೋವಧೆ ಮತ್ತು ಗೋಮೇಧದಲ್ಲಿ ಗೋಮಾಂಸವನ್ನು ಅರ್ಪಿಸುವುದು ನಿರಾಧಾರ ಕಲ್ಪನೆಗಳು.

ಗೋ ಪದಕ್ಕೆ, ಹಸು, ಅದರ ಹಾಲು, ಅದರ ಬೆಣ್ಣೆ, ಅದರ ಮಜ್ಜಿಗೆ, ಅಥವ ತುಪ್ಪ, ಅದರ ಮೂತ್ರ, ಅದರ ಸೆಗಣಿ, ಅದರ ತೊಗಲು, ಅದರ ಕೂದಲು, ಅದರ ಮೂಳೆ ಇತ್ಯಾದಿ ಹಲವು ಅರ್ಥಗಳಿವೆ. ವೇದದಲ್ಲಿ ಇದನ್ನು ಮುಖ್ಯವಾಗಿ "ಹಾಲು" ಮತ್ತು "ತುಪ್ಪ" ದ ಅರ್ಥದಲ್ಲಿ ಉಪಯೋಗಿಸಲಾಗಿದೆ. ಇದನ್ನು ವಿಶೇಷವಾಗಿ ಮನಸ್ಸಿನಲ್ಲಿಟ್ಟುಕೊಳ್ಳಬೇಕು.

ವುಡ್‌ಲಾಂಡ್ಸ್ 20-10-72 ರಿಂದ ಅಮೋಘ 4ನೇ ವಾರ

ರಾಜೇಂದ್ರ ಕುಮಾರ್ ಅರ್ಪಿಸುವ ರೋಸ್ ಮೂವೀಸ್‌ರವರ
ಹಿಂದಿ ಕಲರ್ ಅತ್ಯಮೋಘ ಚಿತ್ರ

ಜವಾನಿ ದಿವಾನಿ

ಪಾತ್ರ – ರಣಧೀರ್ ಕಪೂರ್, ಜಯಬಾಧುರಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ 10-30 ಕ್ಕೆ ವಿಧಿವಿಲಾಸ

ಅಪೆರಾ 2 ನೇ ವಾರ

ಬಾಂಧವ್ಯ

ಪಾತ್ರ – ಅಶ್ವತ್ಥ್, ಗಂಗಾಧರ್, ಕಾಜೇಶ್, ಬಿ. ವಿ. ಕಾಶ, ಪಂಡರೀಬಾಯಿ
ಸಂಧ್ಯ ರಾಣಿ, ಜಯಶ್ರೀ, ರಮಾದೇವಿ ದಿನ 3 ಪ್ರದರ್ಶನಗಳು

Contribute Liberally to the National Defence Fund

Edited Printedand Published by Dharmapracharanirata M S Krishna Rao (Propretor) at the Satyavadi Press Chamarajapuram Mysore